## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಮತ್ತು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಅನುಸರಿಸ ಬೇಕಾದ ಮಾರ್ಗಸೂಚಿಗಳು.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ:ಸಕಇ 36 ಬಿಸಿಎ 2012 ದಿ:12-4-2012.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ:12-4-2012ರ ಆದೇಶದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಡಾ!!ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಹಾಗೂ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಅನುಷ್ಠಾನಗೊಳಿಸಿರುವ ವಿವಿಧ ಯೋಜನೆಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡಲು ಮಾರ್ಗ ಸೂಚನೆಗಳನ್ನು ನೀಡಿ ಆದೇಶಿಸಲಾಗಿದೆ.

ಮೇಲ್ಕಂಡ ನಿಗಮಗಳಿಂದ ಜಾರಿಗೊಳಿಸುತ್ತಿರುವ ಗಂಗಾ ಕಲ್ಯಾಣ ಮುಂದುವರೆದ ಯೋಜನೆಯನ್ನು ಸುಲಭವಾಗಿ ವಿಳಂಬ ವಿಲ್ಲದೆ ಅನುಷ್ಠಾನಗೊಳಿಸುವುದರಲ್ಲಿ ಕೆಲವೊಂದು ಅಡಚಣೆಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು ಅವುಗಳ ನಿವಾರಣೆಗಾಗಿ ಮಾರ್ಗಸೂಚಿನೆಗಳನ್ನು ತಯಾರಿಸಿ ಜಾರಿಗೊಳಿಸಲು ಸರ್ಕಾರ ತೀರ್ಮಾನಿಸಿದೆ.

**ಸರ್ಕಾರದ ಆದೇಶ ಸಂಖ್ಯೆ ಸಕಇ 36 ಬಿಸಿಎ 2012 ದಿನಾಂಕ:29-8-2012**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಡಾ!!ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಮತ್ತು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯನ್ನು ಸುಲಭವಾಗಿ ವಿಳಂಬವಿಲ್ಲದೆ ಜಾರಿಗೊಳಿಸಲು ಅನುಬಂಧದಲ್ಲಿ ಲಗತ್ತಿಸಿರುವ ಮಾರ್ಗ ಸೂಚಿಗಳ ಅನುಸಾರ ಕಟ್ಟು ನಿಟ್ಟಾಗಿ ಪಾಲಿಸಲು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ನಂಜುಂಡಪ್ಪ)
ಸರ್ಕಾರದ ಉಪ ಕಾರ್ಯದರ್ಶಿ.
ಸಮಾಜ ಕಲ್ಯಾಣ ಇಲಾಖೆ.

ಡಾ|| ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ
ದಿನಾಂಕ 5643
04 SEP
ಕೇಂದ್ರ ಕಛೇರಿ,
ಬೆಂಗಳೂರು-1.

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕೋರಿದೆ.

ಪ್ರತಿಗಳು:-

1) ಮಹಾಲೇಖಪಾಲರು, ಕರ್ನಾಟಕ ಸರ್ಕಾರ, ಬೆಂಗಳೂರು.
2) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

MD-1113
04/09/12

ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.

4) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.

5) ವ್ಯವಸ್ಥಾಪಕ ನಿರ್ದೇಶಕರು, ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಬೆಂಗಳೂರು.

6) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು.

7) ವ್ಯವಸ್ಥಾಪಕ ನಿರ್ದೇಶಕರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು.

8) ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಸಮಾಜ ಕಲ್ಯಾಣ / ಪರಿಶಿಷ್ಟ ವರ್ಗಗಳ / ಹಿಂದುಳಿದ ವರ್ಗಗಳ ಅಧಿಕಾರಿಗಳು ( ವ್ಯವಸ್ಥಾಪಕ ನಿರ್ದೇಶಕರುಗಳ ಮುಖಾಂತರ)

9) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆ, ಇವರ ಆಪ್ತಕಾರ್ಯದರ್ಶಿ ಬೆಂಗಳೂರು.

10) ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.

11) ಸರ್ಕಾರದ ಉಪಕಾರ್ಯದರ್ಶಿ 1-2 ಸಮಾಜ ಕಲ್ಯಾಣ ಇಲಾಖೆ / ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು ಬೆಂಗಳೂರು.

12) ಶಾಖಾ ರಕ್ಷಾ ಕಡತ.

13) ಹೆಚ್ಚುವರಿ ಪ್ರತಿ.

# ಅನುಬಂಧ

## ಗಂಗಾ ಕಲ್ಯಾಣ ಯೋಜನೆಯಡಿ ಅನುಸರಿಸಬೇಕಾದ ವಿಧಾನಗಳ ಬಗ್ಗೆ

## ಮಾರ್ಗ ಸೂಚಿಗಳು:

1. ಆಯ್ಕೆ ವಿಧಾನದ ಬಗ್ಗೆ ಈಗಾಗಲೇ ನೀಡಿದ ಸರ್ಕಾರಿ ಆದೇಶ ಸಂಖ್ಯೆ ಸಕಇ 36 ಬಿಸಿಎ 2012 ದಿನಾಂಕ 12.04.2012 ನ್ನು ಚಾಚೂತಪ್ಪದೆ ಪಾಲಿಸತಕ್ಕದ್ದು.
2. ಆಯ್ಕೆಗೊಂಡ ಫಲಾಪೇಕ್ಷಿಗಳ ಸ್ಥಳ ಪರಿಶೀಲನೆ ಮಾಡಿ ಅರ್ಹರಿರುವ ಬಗ್ಗೆ ನಿಗಮದ ಅಧಿಕಾರಿಗಳು ವರದಿ ತಯಾರಿಸಿಕೊಳ್ಳಬೇಕು. (ನಮೂನೆ-1 ಲಗತ್ತಿಸಿದೆ)
3. ಅರ್ಹರೆಂದು ಕಂಡುಬಂದ ಎಲ್ಲಾ ಫಲಾಪೇಕ್ಷಿಗಳ ಪಟ್ಟಿಯನ್ನು ನಿಗಧಿಪಡಿಸಿದ ಗುತ್ತಿಗೆದಾರರಿಗೆ ನೀಡಿ, ಭೂಭೌತ ಸಮೀಕ್ಷೆ ನಡೆಸಿ ವರದಿ ಸಲ್ಲಿಸಲು ತಿಳಿಸುವುದು.
4. ಸಫಲ ಜಲಬಿಂಧು ದೊರೆತ ಪ್ರಕರಣಗಳಲ್ಲಿ ಕೊಳವೆಬಾವಿಮಂಜೂರಾತಿ ಪತ್ರವನ್ನು ಫಲಾಪೇಕ್ಷಿಗಳಿಗೆ ಕಳುಹಿಸಿ, ಕೆಳಕಂಡ ದಾಖಲಾತಿಯನ್ನು **ಅವಧಿಸಾಲ ಮಂಜೂರಾತಿಗಾಗಿ** ಸಲ್ಲಿಸಲು ತಿಳಿಸುವುದು (ಮಂಜೂರಾತಿ ಪತ್ರದ ಪ್ರತಿ ಲಗತ್ತಿಸಿದೆ. ನಮೂನೆ-1 (ಅ)
   1. ರೂ, 20/- ಛಾಪಾ ಕಾಗದದಲ್ಲಿ ಒಪ್ಪಿಗೆ ಪತ್ರ (ನಮೂನೆ-1 (ಆ)
   2. ಪ್ರೋನೋಟ್ (ರೂ, 20/-ರ ಛಾಪಾ ಕಾಗದದಲ್ಲಿ)
   3. ಕನ್ಸಿಡರೇಷನ್ ರಸೀದಿ (ರೂ, 20/-ರ ಛಾಪಾ ಕಾಗದದಲ್ಲಿ)
   4. ಲೋನ್ ಅಗ್ರಿಮೆಂಟ್ (ರೂ, 50/-ರ ಛಾಪಾ ಕಾಗದದಲ್ಲಿ)
5. ಜಮೀನಿನ ಮೇಲೆ ಬೋಜಾ ದಾಖಲಿಸಲು ನೀಡಿರುವ ಒಪ್ಪಿಗೆ ಪತ್ರವನ್ನು ಸಂಬಂಧಪಟ್ಟ ತಹಶಿಲ್ದಾರ್ ಕಛೇರಿಗೆ ನಮೂನೆ-1(ಇ) ನಂತೆ ಕಳುಹಿಸಿ ತಲುಪಿದ ಬಗ್ಗೆ ಸ್ವೀಕೃತಿ ಪಡೆಯಬೇಕು ಮತ್ತು ನಿಗಮದ ಬೋಜಾ ದಾಖಲಾಗಿರುವ ಪಹಣಿ ಪತ್ರಿಕೆಯನ್ನು ತರಿಸಿ ಕಡತದಲ್ಲಿ ಜೋಡಿಸಿಕೊಳ್ಳುವುದು.
6. ನಿಗಮದ ಪರವಾಗಿ **ಭೂದಾಖಲೆಗಳಲ್ಲಿ ಭೋಜಾ ಕೂಡಿಸಿದ** ನಂತರ ಭೂಭೌತ ಸಮೀಕ್ಷೆಯ ವರದಿ ಆಧಾರದಲ್ಲಿ ಕೊಳವೆಬಾವಿ ಕೊರೆಯುವಂತೆ ಕಾರ್ಯಾದೇಶ ನೀಡುವುದು. ಇದರಿಂದ ಮುಂದಿನ ಕ್ರಮಗಳಾದ **ಪಂಪ್** ಸಪ್ಲೈ ಇತ್ಯಾದಿ ಬಗ್ಗೆ ಆಗುತ್ತಿರುವ ವಿಳಂಬವನ್ನು ತಡೆಯಬಹುದಾಗಿದೆ. (ಕಾರ್ಯಾದೇಶದ ಪ್ರತಿ ನಮೂನೆ-2 ಲಗತ್ತಿಸಿದೆ).
7. ಕೊಳವೆಬಾವಿ ಕೊರೆಯುವ **ಸ**ಮಯದಲ್ಲಿ ನಿಗಮದ ತಾ.ಅ.ಅ./ಸಿಬ್ಬಂದಿ/ ಫಲಾನುಭವಿ ಹಾಜರಿದ್ದು ಕೊಳವೆಬಾವಿ ಕೊರೆದ ವಿವರಗಳನ್ನು ನಮೂನೆ-3ರಲ್ಲಿ ನಿಖರವಾಗಿ ದಾಖಲಿಸಿಕೊಳ್ಳಬೇಕು. (ನಮೂನೆ-3 ಲಗತ್ತಿಸಿದೆ) ಉಪಯೋಗಿಸಿದ ಕೇಸಿಂಗ್ ಪೈಪ್ ನಿಗದಿಪಡಿಸಿದ ದಪ್ಪದ / ವಿಶಿಷ್ಟತೆಗೆ ಅನುಗುಣವಾಗಿರುವ ಬಗ್ಗೆ ದೃಢೀಕರಿಸಿಕೊಳ್ಳಬೇಕು. ಒಂದುವೇಳೆ, ವಿಶಿಷ್ಟತೆಗೆ ಅನುಗುಣವಾಗಿ ಇಲ್ಲದೇ ಇದ್ದಲ್ಲಿ ಅದನ್ನು ತಕ್ಷಣವೇ ಸಂಬಂಧಿಸಿದ ದಾಖಲಾತಿಗಳಲ್ಲಿ ನಮೂದಿಸುವುದು. ಕೊರೆಯುವಾಗ ನಿಗಧಿತ 1000 ಜಿ.ಪಿ.ಹೆಚ್.ಗಿಂತ ಹೆಚ್ಚಿನ

ಪ್ರಮಾಣದ ನೀರು ದೊರೆತ ಸಂದರ್ಭದಲ್ಲಿ ಭಾವಚಿತ್ರ ತೆಗೆದು ನಮೂನೆ-3 (ಅ) ಜೊತೆ ಲಗತ್ತಿಸಿ ಕೇಂದ್ರ ಕಛೇರಿಗೆ ಕಳುಹಿಸುವುದು.

8. ವಿದ್ಯುತ್ ಸಂಪರ್ಕಕ್ಕಾಗಿ ಎಸ್ಕಾಂಗೆ ಸಲ್ಲಿಸಬೇಕಾದ ನಿಗದಿಪಡಿಸಿದ ರಿಜಿಸ್ಟ್ರೇಷನ್ ನಮೂನೆ-3(ಆ) ರಲ್ಲಿ ಫಲಾನುಭವಿಯಿಂದ ಸಹಿ ಪಡೆಯಬೇಕು

9. ಈ ರೀತಿಯಾಗಿ ಕೊಳವೆಬಾವಿ ಕೊರೆದ ಬಗ್ಗೆ ತಯಾರಿಸಲಾದ ನಮೂನೆ-3 ಮತ್ತು ಗುತ್ತಿಗೆದಾರರು ಸಲ್ಲಿಸುವ ಬಿಲ್‌ಗಳನ್ನು ಸಂಬಂಧಪಟ್ಟ ದೃಡೀಕರಣಗಳ ನಂತರ ಕೇಂದ್ರ ಕಛೇರಿಗೆ ಫೋಟೋ ದಾಖಲಾತಿಗಳೊಂದಿಗೆ ಕೋರಿಯರ್ ಅಥವಾ ಸ್ಪೀಡ್ ಪೋಸ್ಟ್ ಮುಖಾಂತರ ಕಳುಹಿಸುವುದು.

10. ಅಂದಾಜುಪಟ್ಟಿ ತಯಾರಿಸಿ ಕೇಂದ್ರ ಕಛೇರಿಗೆ ಕಳಿಸಲು ಘೋಷ್ವಾರೆಯೊಂದಿಗೆ ಕಳಿಸಬೇಕಾದ ನಮೂನೆಯನ್ನು ಲಗತ್ತಿಸಿದೆ. (ನಮೂನೆ-3(ಇ)

11. **ಕೊಳವೆಬಾವಿ ಕೊರೆದಿರುವ** ಮಾಹಿತಿಯನ್ನಾಧರಿಸಿ (ಆಳ, ನೀರಿನ ಪ್ರಮಾಣ) ರಿಜಿಸ್ಟ್ರೇಷನ್ **ಫಾರ್ಮ್ ಭರ್ತಿ ಮಾಡಿ,** ಈ ಕೆಳಕಂಡ ದಾಖಲೆಗಳೊಂದಿಗೆ ಎಸ್ಕಾಂ ಕಛೇರಿಯಲ್ಲಿ **ನೋಂದಾಯಿಸಬೇಕು.**

   1. ರಿಜಿಸ್ಟ್ರೇಷನ್ ನಮೂನೆ (ಲಗತ್ತಿಸಿದೆ)
   2. ಗಂಗಾ ಕಲ್ಯಾಣ ಯೋಜನೆಯಡಿ ಕೊರೆದಿರುವ ಬಗ್ಗೆ ದೃಢೀಕರಣ
   3. ಪಹಣಿ
   4. ನೋಂದಣಿ ಶುಲ್ಕ ಮತ್ತು ಪ್ರಾರಂಭಿಕ ಭದ್ರತಾ ಠೇವಣಿ(ಐ.ಎಸ್.ಡಿ.), ಮೀಟರ್ ಭದ್ರತಾ ಠೇವಣಿ (ಎಂ.ಎಸ್.ಡಿ) ಹಾಗೂ ಮೀಟರ್ ಬಾಕ್ಸ್ ಶುಲ್ಕವನ್ನು (ಆಯಾ ಎಸ್ಕಾಂಗಳಲ್ಲಿ ನಿಗದಿಪಡಿಸಿರುವಂತೆ), ಸರಬರಾಜು ಮಾಡುವ ಪಂಪ್‌ಸೆಟ್ ಹೆಚ್.ಪಿ. ಆಧರಿಸಿ ಡಿ.ಡಿ. ಮುಖಾಂತರ ಪಾವತಿಸಬೇಕು. ಈ ಕಾರ್ಯವು ಕೊಳವೆಬಾವಿ ಕೊರೆದ ಒಂದು ವಾರದೊಳಗೆ ಪೂರ್ಣಗೊಳಿಸಬೇಕು. ರಿಜಿಸ್ಟ್ರೇಷನ್ ಸಮಯದಲ್ಲಿಯೇ ಇವೆಲ್ಲವನ್ನೂ ಪಡೆದು ಈ ಬಾಬ್ತು ತಗಲುವ ವೆಚ್ಚವನ್ನು ಒಟ್ಟಾರೆ ಘಟಕ ವೆಚ್ಚದಲ್ಲಿ ಭರಿಸುವುದು.

12. ಈ ಹಂತದಲ್ಲಿ ಬೇಕಾದ ಪಂಪ್‌ಸೆಟ್ ಹಾಗೂ ಪೂರಕಗಳ ಲೆಕ್ಕಾಚಾರ ಮಾಡಿಕೊಂಡು ಸಹಾಯಧನಕ್ಕಿಂತ ಹೆಚ್ಚಿಗೆ ಬೇಕಾದ ಮೊತ್ತವನ್ನು ಲೆಕ್ಕಾಚಾರ ಮಾಡಬೇಕು. ಈ ಮೊತ್ತವು ಉಳಿದಿರುವ ಸಹಾಯಧನ ಮತ್ತು ರೂ. 50,000/- ಅವಧಿಸಾಲಕ್ಕೂ ಮೀರುವಂತಿದ್ದಲ್ಲಿ, ಹೆಚ್ಚುವರಿ ಮೊತ್ತವನ್ನು ಫಲಾನುಭವಿ ಪಾವತಿಸುವಂತೆ ತಿಳಿಸಬೇಕು.

    1. ಲಭ್ಯವಿರುವ ಸಹಾಯಧನದಲ್ಲಿಯೇ ಆಗುವಂತಿದ್ದಲ್ಲಿ, ನಿಗಮದ ಹೆಸರು ದಾಖಲ್ಮಾಡಿರುವ ಬೋಜಾ ರದ್ದುಪಡಿಸುವುದು. ಹಾಗೂ ಪಂಪ್‌ಸೆಟ್ ಮತ್ತು ಪೂರಕಗಳನ್ನು ಸರಬರಾಜು ಮಾಡಿಸುವುದು.
    2. ಉಳಿದ ಸಹಾಯಧನ ಮತ್ತು ರೂ. 50,000/-ದವರೆಗೆ ಎಷ್ಟು ಬೇಕಾಗುತ್ತದೋ ಅಷ್ಟು ಅವಧಿಸಾಲ ಮಂಜೂರು ಮಾಡಿಕೊಂಡು ಪಂಪ್‌ಸೆಟ್ ಸರಬರಾಜು ಮಾಡಿಸುವುದು (ಈ ಸಾಲದ ಮೊತ್ತವನ್ನು ಮಾತ್ರ ಪ್ರೋನೋಟ್, ಕನ್ಸಿಡರೇಷನ್ ರಶೀದಿ ಮತ್ತು ಲೋನ್ ಅಗ್ರಿಮೆಂಟ್‌ನಲ್ಲಿ ನಮೂದಿಸುವುದು)

3. ಅವಧಿಸಾಲ ರೂ. 50,000/-ಕ್ಕಿಂತ ಹೆಚ್ಚಿಗೆ ತಗುಲುವುದಿದ್ದಲ್ಲಿ, ಈ ಹೆಚ್ಚುವರಿ ಮೊತ್ತವನ್ನು ಫಲಾನುಭವಿಯಿಂದ ನಿಗಮಕ್ಕೆ ಪಾವತಿಸಿಕೊಂಡು, ರಸೀದಿ ನೀಡಿ, ಪಂಪ್‌ಸೆಟ್ ಸರಬರಾಜು ಮಾಡಿಸುವುದು. (ಅವಧಿಸಾಲ ಮಂಜೂರು ಮಾಡುವ ಆದೇಶದ ನಮೂನೆ-4 ಲಗತ್ತಿಸಿದೆ)

13. ಕೊಳವೆಬಾವಿ ಕೊರೆಯುವಾಗ ಉಪಯೋಗಿಸುತ್ತಿರುವ ಕೇಸಿಂಗ್ 3ನೇ ತಪಾಸಣಾ ಸಂಸ್ಥೆಯಿಂದ ಪರಿಶೀಲನೆ ಮಾಡಲ್ಪಟ್ಟಿರುವ ಬಗ್ಗೆ ದೃಢೀಕರಣಪಡೆಯಬೇಕು.

14. ಕೊಳವೆಬಾವಿ ಕೊರೆಯುವಾಗ ಒಂದು ವೇಳೆ ವಿಫಲವಾದಲ್ಲಿ, ನಮೂನೆ-3ರಲ್ಲಿ ದಾಖಲಿಸಿಕೊಂಡು, ಜಿಲ್ಲಾ ಕಛೇರಿಯಲ್ಲಿ ದಾಖಲೆ ಇಟ್ಟುಕೊಳ್ಳಬೇಕು. ಇಂತಹ ವಿಫಲ ಕೊಳವೆಬಾವಿಗಳನ್ನು ಕೂಡಲೇ ಕಲ್ಲು ಮಣ್ಣುಗಳಿಂದ ಮುಚ್ಚಬೇಕು. ಫಲಾನುಭವಿಗೆ, ಜಮೀನಿನ ಮೇಲೆ ದಾಖಲಾದ ಬೋಜಾ ರದ್ದುಪಡಿಸಲು ಸಂಬಂಧಪಟ್ಟ ತಹಶಿಲ್ದಾರರಿಗೆ ಪತ್ರ ಕಳಿಸುವುದು.

15. ಕೇಂದ್ರ ಕಛೇರಿಯಿಂದ ನೀಡಿರುವ ಕಾರ್ಯಾದೇಶದ ಆಧಾರದ ಮೇಲೆ ಪಂಪ್‌ಸೆಟ್ ಗುತ್ತಿಗೆದಾರರು ಪಂಪ್‌ಸೆಟ್ ಮತ್ತು ಪೂರಕಗಳನ್ನು ಸರಬರಾಜು ಮಾಡಲು ಬಂದಾಗ ಎಲ್ಲಾ ಸಾಮಗ್ರಿಗಳನ್ನು 3ನೇ ತಪಾಸಣಾ ಸಂಸ್ಥೆಯಿಂದ ಪರಿಶೀಲಿಸಲ್ಪಟ್ಟಿರುವ ಬಗ್ಗೆ ದೃಢೀಕರಿಸಿಕೊಳ್ಳಬೇಕು. ಸರಬರಾಜು ಮಾಡಿದಾಗ ನಿಗಧಿಪಡಿಸಿದ ನಮೂನೆ-5 ರಲ್ಲಿ ಎಲ್ಲಾ ದಾಖಲಿಸಿಕೊಂಡು ಕೇಂದ್ರ ಕಛೇರಿಗೆ ಕಳಿಸಬೇಕು. ಎಲ್ಲಾ ಪಂಪ್‌ಸೆಟ್ ಮತ್ತು ಸಾಮಗ್ರಿಗಳ ಭಾವಚಿತ್ರ ತೆಗೆದು ನಮೂನೆ-5(ಅ) ನೊಂದಿಗೆ ಲಗತ್ತಿಸಿ ಕಳಿಸುವುದು.

16. ಪಂಪ್ ಸೆಟ್ ಸರಬರಾಜು ಮಾಡಿದ ಬಗ್ಗೆ ಬಿಲ್ಲುಗಳನ್ನು ಕ್ರೋಢೀಕರಿಸಿ ನಮೂನೆ-5(ಆ) ರ ಘೋಷ್ವಾರೆಯೊಂದಿಗೆ ಕೇಂದ್ರ ಕಛೇರಿಗೆ ಕಳಿಸುವುದು.

17. ಪಂಪ್‌ಸೆಟ್ ಮತ್ತು ಪೂರಕಗಳನ್ನು, ವಿಳಂಬವಿಲ್ಲದೆ ಕೊಳವೆಬಾವಿಗೆ ಅಳವಡಿಸಿ ನಿಗದಿಪಡಿಸಿದ ನಮೂನೆ-5(ಇ) ನಲ್ಲಿ ಕೇಂದ್ರ ಕಛೇರಿಗೆ ಹಣ ಪಾವತಿಗಾಗಿ ಕಳಿಸಬೇಕು. ಅಳವಡಿಸಿದ ಬಗ್ಗೆ ಭಾವಚಿತ್ರ ತೆಗೆದು ನಮೂನೆ-5(ಈ) ನೊಂದಿಗೆ ಲಗತ್ತಿಸಿ ಕಳಿಸುವುದು.

18. ಪಂಪ್‌ಸೆಟ್ ಅಳವಡಿಸಿದ ಕೂಡಲೇ ಕಂಪ್ಲೀಷನ್ ವರದಿ ಮತ್ತು ವೈರಿಂಗ್ ಡಯಾಗ್ರಮ್‌ಗಳನ್ನು ವಿದ್ಯುತ್ ಗುತ್ತಿಗೆದಾರರಿಂದ ಎಸ್ಕಾಂಗೆ ಸಲ್ಲಿಸಬೇಕು.

19. ವಿದ್ಯುದ್ದೀಕರಣವಾದ ಒಂದು ತಿಂಗಳೊಳಗೆ ಸ್ಥಳ ಪರಿಶೀಲನೆ ನಡೆಸಿ ನಮೂನೆ-6 ಮತ್ತು ನಮೂನೆ-7 ರಲ್ಲಿ ಕೇಂದ್ರ ಕಛೇರಿಗೆ ಪೂರ್ಣಗೊಂಡ ವರದಿ ಕಳಿಸಬೇಕು.

20. ಪ್ರತಿ ತಿಂಗಳು ಕೇಂದ್ರ ಕಛೇರಿಗೆ ಕಳುಹಿಸಬೇಕಾದ ನಮೂನೆಗಳನ್ನು ಲಗತ್ತಿಸಿದೆ.

ಅ. ವಿದ್ಯುದ್ದೀಕರಣದ ಪ್ರಗತಿ (ನಮೂನೆ 8, 8(ಅ), 8(ಆ), ಮತ್ತು 8(ಇ).

ಆ. ಕೊಳವೆಬಾವಿ ಕೊರೆಯುವಿಕೆಯಲ್ಲಿ ಸಾಧಿಸಿದ ಪ್ರಗತಿ ನಮೂನೆ-9.

(ನಂಜುಂಡಪ್ಪ)
ಸರ್ಕಾರದ ಉಪ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.